**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 3520/2021**

| | | | |
|---|---|---|---|
| **ಹೆಸರು** | **:** | **ಆನಂದ ಕಾಂಬ್ಳೆ** | **ಚಾ.ಸಾ. 4** |
| **ತಂದೆಯ ಹೆಸರು** | **:** | **ಚಂದ್ರಶಾ** | **ಪ್ರಾ.ಸಾ. 3** |
| **ವಯಸ್ಸು** | **:** | **45 ವರ್ಷ** | **ದಿನಾಂಕಃ 02-09-2024.** |
| **ಉದ್ಯೋಗ** | **:** | **ಆರೋಗ್ಯ ನಿರೀಕ್ಷಕ** | |
| **ವಾಸಸ್ಥಳ** | **:** | **ಚಿಂಚೋಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕಃ 17-02-2017 ರಿಂದ ಚಿಂಚೋಳಿ ಪುರಸಭೆಯಲ್ಲಿ ಆರೋಗ್ಯ ನಿರೀಕ್ಷಕನಾಗಿ ಕಾರ್ಯನಿರ್ವಹಿಸಿದ್ದೇನೆ.

ಪ್ರಾಸಾ 2, ಚಾಸಾ 5 ರಿಂದ 8 ರವರ ನನಗೆ ಗೊತ್ತು. ಚಾಸಾ 5 ಮತ್ತು 6 ನಮ್ಮ ಸಿಬ್ಬಂದಿ.

ದಿನಾಂಕಃ 11-05-2021 ರಂದು ಬೆಳಿಗ್ಗೆ 10-15 ರಿಂದ 10-20 ಗಂಟೆ ಸುಮಾರಿಗೆ ನಾನು ಮತ್ತು ಪ್ರಾಸಾ 2 ಮತ್ತು ಸಿಬ್ಬಂದಿಯಾದ ಚಾಸಾ 5, 6 ರವರು ಸೇರಿ ಚಂದಾಪುರದ ಮಹಾತ್ಮ ಗಾಂಧಿ ವೃತ್ತದ ಹತ್ತಿರ ಕೋವಿಡ-19 ಸಂಕ್ರಮಣ ನಿವಾರಿಸಲು ಗಸ್ತು ಕರ್ತವ್ಯದಲ್ಲಿದಾಗ ಮುನ್ನಾ ಭಾಯಿ ಎಂಬ ಚಹಾ ಹೋಟೆಲ ಹತ್ತಿರ ಸಾರ್ವಜನಿಕರು ನಿಂತಿದ್ದು, ನಮ್ಮನ್ನು ನೋಡಿ ಅಲ್ಲಿಂದ ಓಡಿ ಹೋಗಿರುತ್ತಾರೆ. ಸದರಿ ಹೋಟೆಲನಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿ ಇದ್ದ. ಆಗ ಪ್ರಾಸಾ 1 ರವರು ಆರೋಪಿಗೆ ಹೋಟೆಲನ್ನು ಮುಚ್ಚಲು ಹೇಳಿದರೂ ಸಹ ಅವನು ಮುಚ್ಚಲಿಲ್ಲ. ಆದ್ದರಿಂದ ಪ್ರಾಸಾ 1 ರವರು ಘಟನೆ ಬಗ್ಗೆ ದೂರು ನೀಡಿದ್ದಾರೆ. ಘಟನೆ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ. ಆ ದಿನ ನಾವು ಹೋಗಿದ್ದ ಹೋಟೆಲನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಹೋಟೆಲ ಈಗ ನೋಡುತ್ತಿರುವ ನಿಪಿ-2 ರ ಭಾವಚಿತ್ರದಲ್ಲಿ ಇದೆ. ಘಟನೆಯ ಬಗ್ಗೆ ಚಾಸ 5 ಮತ್ತು 6 ರವರು ಸಹ ಪೋಲಿಸರಿಗೆ ಹೇಳಿಕೆ ನೀಡಿದ್ದಾರೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ SAS ವಕೀಲರು ಯಾವುದೇ ಕಾರಣವಿಲ್ಲದೇ ಸಮಯ ಕೋರಿದ್ದರಿಂದ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**